# ಕರ್ನಾಟಕ ಸರ್ಕಾರದ ನಡವಳಿ

**ವಿಷಯ:** ಶ್ರೀ ಎಂ.ಎಸ್.ಚಂದ್ರು, ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು, ಇರಸವಾಡಿ ಗ್ರಾಮ ಪಂಚಾಯತ್, ಇರಸವಾಡಿ, ಚಾಮರಾಜನಗರ ಜಿಲ್ಲೆ (ಹಾಲಿ ಉಮ್ಮತ್ತೂರು ಗ್ರಾಮ ಪಂಚಾಯತ್, ಚಾಮರಾಜನಗರ ತಾಲ್ಲೂಕು ಮತ್ತ ಜಿಲ್ಲೆ) ಸರ್ಕಾರಿ/ಸಾರ್ವಜನಿಕ ನೌಕರರಾಗಿ ದುರ್ನಡತೆ ಎಸಗಿರುವ ಕುರಿತು ವರದಿ.

**ಓದಲಾಗಿದೆ:**

ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು, ಇವರ ಪತ್ರ ಸಂಖ್ಯೆ: D.O.NO.Compt/Uplok/MYS-1978/2014 Dated:09-05-2017.

**ಪ್ರಸ್ತಾವನೆ:**

ಮೇಲೆ ಓದಲಾದ ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರ ಪತ್ರದ ಸಂಗಡ ಕಳುಹಿಸಿರುವ ಮಾನ್ಯ ಉಪಲೋಕಾಯುಕ್ತರು ದಿನಾಂಕ:21-04-2017 ರಂದು ತಮ್ಮ ವರದಿಯಲ್ಲಿ ದೂರುದಾರರಾದ ಶ್ರೀ ಚಿಕ್ಕರಾಜು ಬಿನ್ ಚಿಕ್ಕಯ್ಯ ಸುತ್ತೂರು ಗ್ರಾಮ, ಇರಸವಾಡಿ ಅಂಚೆ, ಚಾಮರಾಜನಗರ ತಾಲ್ಲೂಕು ಮತ್ತ ಜಿಲ್ಲೆ ಅವರು ಶ್ರೀ ಎಂ.ಎಸ್.ಚಂದ್ರು, ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು, ಇರಸವಾಡಿ ಗ್ರಾಮ ಪಂಚಾಯತ್, ಇರಸವಾಡಿ, ಚಾಮರಾಜನಗರ ಜಿಲ್ಲೆ ರವರು ಎಂ.ಜಿ.ಎನ್.ಆರ್.ಇ.ಜಿ.ಎ ಯೋಜನೆಯಡಿ ಗಂಗವಾಡಿ ಕೆರೆ ಹೂಳೆತ್ತುವ ಕಾಮಗಾರಿ ಹಾಗೂ ಗಂಗವಾಡಿ ಗ್ರಾಮದ ಚರಂಡಿ ಹೂಳೆತ್ತುವ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಕೂಲಕಾರರ ಹಣವನ್ನು ಎದುರುದಾರರು ಸಂದಾಯ ಮಾಡಿರುವುದಿಲ್ಲವೆಂದು ನೀಡಿದ ದೂರಿಗೆ ಸಂಬಂಧಿಸಿದಂತೆ ಮು.ಕಾ.ನಿ. ಜಿ.ಪಂ. ಚಾಮರಾಜನಗರ ಜಿಲ್ಲೆ ರವರು ಅಮಾನತ್ತುಗೊಳಿಸಿ ನಂತರ ಯಾವುದೇ ವಿಚಾರಣೆ ನಡೆಸದೆ ಪುನ: ಕೆಲಸಕ್ಕೆ ನೇಮಿಸಿಕೊಂಡಿರುತ್ತಾರೆಂದು ನೀಡಿದ ದೂರನ್ನು ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ಕಲಂ 9 ರಡಿಯಲ್ಲಿ ಪ್ರದತ್ತವಿರುವ ಅಧಿಕಾರ ಚಲಾಯಿಸಿ ವಿಚಾರಣೆಗೆ ತೆಗೆದುಕೊಂಡಿರುವುದಾಗಿ ತಿಳಿಸಿರುತ್ತಾರೆ.

ಅನಂತರ ಸದರಿ ತನಿಖೆ ಕೈಗೊಳ್ಳಲು ಸದರಿ ಸಂಸ್ಥೆಯ ಕಾರ್ಯನಿರ್ವಹಕ ಅಧಿಕಾರಿಗಳು, ತಾಲೂಕು ಪಂಚಾಯತ್, ಚಾಮರಾಜನಗರ (ಇನ್ನು ಮುಂದೆ ತನಿಖಾಧಿಕಾರಿಗಳು ಎಂದು ಸಂಬೋದಿಸಲಾಗುವುದು) ಇವರಿಗೆ ವಹಿಸಿದ್ದು ಸದರಿಯವರ ದೂರಿನ ತನಿಖೆ ಕೈಗೊಳಲು ಸಹಾಯಕ ಲೆಕ್ಕಾಧಿಕಾರಿ,ತಾಲೂಕು ಪಂಚಾಯತ್,ಚಾಮರಾಜನಗರ ಇವರಿಗೆ ವಹಿಸಿದ್ದು,ಸದರಿಯವರು ದಿನಾಂಕ :28/04/2017 ರಂದು ತಮ್ಮ ವರದಿಯನ್ನು ಕಾರ್ಯನಿರ್ವಹಕ ಅಧಿಕಾರಿಗಳು,ತಾಲೂಕು ಪಂಚಾಯತ್,ಚಾಮರಾಜನಗರ ರವರಿಗೆ ಸಲ್ಲಿಸಿದ್ದು,ಸದರಿ ವರದಿಯನ್ನು ಕಾರ್ಯನಿರ್ವಹಕ ಅಧಿಕಾರಿಗಳು,ತಾಲೂಕು ಪಂಚಾಯತ್, ಚಾಮರಾಜನಗರ ರವರು ಒಪ್ಪಿ ತಮ್ಮ ಷರಾದೊಂದಿಗೆ ತಮ್ಮ ವರದಿಯನ್ನು ದಿನಾಂಕ:15/03/2017 ರಂದು ಸಲ್ಲಿಸಿರುತ್ತಾರೆ.

ತನಿಖಾಧಿಕಾರಿಗಳು ತಮ್ಮ ವರದಿಯಲ್ಲಿ:

- ಗಂಗವಾಡಿ ಕೆರೆ ಹೂಳು ತೆಗೆಯುವ ಕಾಮಗಾರಿಗೆ ಸಂಬಂಧಿಸಿದಂತೆ ಅಳತೆ ಪುಸ್ತಕದಲ್ಲಿ ರೂ.2,43,000/- ಗಳಿಗೆ ಅಳತೆಯನ್ನು ದಾಖಲಿಸಿ ಎಂ.ಐ.ಎಸ್. ಮಾಡಲಾಗಿದೆ ಎಂತಲೂ ಇದರ ಪೈಕಿ 1,15,590/-ಗಳನ್ನು ಕೂಲಿ ಕಾರ್ಮಿಕರಿಗೆ ಮಾತ್ರ ಪಾವತಿಸಲಾಗಿದೆ ಮತ್ತು,

- ಗಂಗವಾಡಿ ಗ್ರಾಮದ ಚರಂಡಿ ಹೂಳು ತೆಗೆಯುವ ಕಾಮಗಾರಿಗೆ ಸಂಬಂಧಿಸಿದಂತೆ ರೂ49,510/-ಗಳಿಗೆ ಅಳತೆಯನ್ನು ನಮೂದಿಸಿ ಎಂ.ಐ.ಎಸ್, ಮಾಡಲಾಗಿದ್ದು ಇವರ ಪೈಕಿ ರೂ24,750/- ಗಳನ್ನು ಮಾತ್ರ ಕೂಲಿ ಕಾರ್ಮಿಕರಿಗೆ ಪಾವತಿಸಲಾಗಿದೆ ಮತ್ತು ಸದರಿ ಕಾಮಗಾರಿಗಳಿಗೆ ಎಂ,ಐ,ಎಸ್.ನಲ್ಲಿ ದಾಖಲಾಗಿರುವ ಪ್ರಕಾರ ಪೂರ್ಣ ಹಣ ಸಂದಾಯವಾಗಿರುವುದಿಲ್ಲ.

ತನಿಖಾಧಿಕಾರಿಗಳು ಸಲ್ಲಿಸಿರುವ ವರದಿಯನ್ನು ಎದುರುದಾರಿಗೆ ಕಳುಹಿಸಿ ಆಕ್ಷೇಪಣೆಯನ್ನು ಸಲ್ಲಿಸುವಂತೆ ತಿಳಿಸಲಾಗಿದ್ದು, ಸದರಿಯವರ ಈಕಛೇರಿಯಿಂದ ಕಳುಹಿಸಲಾದ ಪತ್ರವನ್ನು ಸ್ವೀಕರಿಸಿದರೂ ಸಹಾ, ಯಾವುದೇ ಪೂರಕ ದಾಖಲಾತಿಗಳನ್ನು ನಿಗಧಿತ ದಿನಾಂಕದೊಳಗಾಗಿ ಸಲ್ಲಿಸಿರುವುದಿಲ್ಲ. ಆದ್ದರಿಂದ, ಸದರಿ ಪ್ರಕರಣದಲ್ಲಿ ಎದುರುದಾರರ ಉತ್ತರ ಹಾಗೂ ದಾಖಲಾತಿಗಳು ಇರುವುದಿಲ್ಲವೆಂದು ಪರಿಗಣಿಸಲಾಗಿದೆ.

- ದೂರಿನಲ್ಲಿ ಇರುವ ಆಪಾದನೆಗಳು,ಎದುರುದಾರರ ಆಕ್ಷೇಪಣೆಗಳು ಹಾಗೂ ತನಿಖಾ ವರದಿಯನ್ನು ಕೂಲಂಕುಷವಾಗಿ ಪರಿಶೀಲಿಸಲಾಗಿ ಎದುರುದಾರರು ಈ ಕೆಳಕಂಡಂತೆ ಕರ್ತವ್ಯಲೋಪ ಎಸಗಿರುವುದು ಮೇಲ್ನೋಟಕ್ಕೆ ಕಂಡುಬರುತ್ತದೆ.
- ಎದುರುದಾರರು ಗಂಗವಾಡಿ ಕೆರೆ ಹೂಳು ತೆಗೆಯುವ ಕಾಮಗಾರಿಗೆ ಸಂಬಂಧಿಸಿದಂತೆ ಅಳತೆ ಪುಸ್ತಕದಲ್ಲಿ ರೂ.2,43,000/- ಗಳಿಗೆ ದಾಖಲಿಸಿ ಎಂ.ಐ.ಎಸ್.ಮಾಡಿರುತ್ತಾರೆ ಹಾಗೂ ಇದರ ಪೈಕಿ ರೂ.1,15,590/-ಗಳನ್ನು ಮಾತ್ರ ಕೂಲಿ ಕಾರ್ಮಿಕರಿಗೆ ಮಾತ್ರ ಪಾವತಿಸುವ ಮೂಲಕ ಕರ್ತವ್ಯ ಲೋಪವೆಸಗಿರುತ್ತಾರೆ. ಹಾಗೂ,
- ಎದುರುದಾರರು ಗಂಗವಾಡಿ ಗ್ರಾಮದ ಚರಂಡಿ ಹೂಳು ತೆಗೆಯುವ ಕಾಮಗಾರಿಗೆ ಸಂಬಂಧಿಸಿದಂತೆ ರೂ.49,510/-ಗಳಿಗೆ ಅಳತೆಯನ್ನು ನಮೂದಿಸಿ ಎಂ.ಐ.ಎಸ್. ಮಾಡಲಾಗಿದ್ದು ಇದರ ಪೈಕಿ ರೂ.24,750/- ಗಳನ್ನು ಮಾತ್ರ ಕೂಲಿ ಕಾರ್ಮಿಕರಿಗೆ ಪಾವತಿಸುವ ಮೂಲಕ ಕರ್ತವ್ಯ ಲೋಪವೆಸಗಿರುವುದು ಮೇಲ್ನೋಟಕ್ಕೆ ಕಂಡುಬರುತ್ತದೆ.
- ಮೇಲ್ಕಂಡ ಸದರಿ ಕಾಮಗಾರಿಗಳಿಗೆ ಎಂ.ಐ.ಎಸ್.ನಲ್ಲಿ ದಾಖಲಾಗಿರುವ ಪ್ರಕಾರ ಪೂರ್ಣ ಹಣವನ್ನು ಎದುರುದಾರರು ಸಂದಾಯ ಮಾಡದೇ ಕರ್ತವ್ಯ ಲೋಪವೆಸಗಿರುವುದು ಮೇಲ್ನೋಟಕ್ಕೆ ಕಂಡುಬರಲುತ್ತದೆ.

ದೂರುದಾರರು ದೂರು ಹಾಗೂ ತನಿಖಾಧಿಕಾರಿಗಳ ವರದಿ ಹಾಗೂ ಕಡತದಲ್ಲಿರುವ ದಾಖಲೆಗಳನ್ನು ಪರಿಶೀಲಿಸಿದಾಗ,ಮೇಲ್ನೋಟಕ್ಕೆ 'ಎದುರುದಾರರ' ಸರ್ಕಾರಿ/ಸಾರ್ವಜನಿಕ ಸೇವಕರಾಗಿದ್ದು ತಮ್ಮ ಕರ್ತವ್ಯ ಪಾಲನೆಯಲ್ಲಿ ಪರಿಪೂರ್ಣ ಕರ್ತವ್ಯ ನಿಷ್ಠೆಯನ್ನು ತೋರಿಸದೆ ಮತ್ತು ಸಾರ್ವಜನಿಕ ಸೇವಕರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡಿರುವುದು ವೇದ್ಯವಾಗಿರುತ್ತದೆ.

ಈ ಹಿನ್ನೆಲೆಯಲ್ಲಿ ಶ್ರೀ ಎಂ.ಎಸ್.ಚಂದ್ರು, ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು, ಇರಸವಾಡಿ ಗ್ರಾಮ ಪಂಚಾಯತ್, ಇರಸವಾಡಿ, ಚಾಮರಾಜನಗರ ಜಿಲ್ಲೆ ಸಾರ್ವಜನಿಕ / ಸರ್ಕಾರಿ ನೌಕರರಾಗಿದ್ದು, ತಮ್ಮ ಕರ್ತವ್ಯ ಪರಿಪಾಲನೆಯಲ್ಲಿ ನಿಷ್ಠೆಯನ್ನು ತೋರದೆ, ಕರ್ತವ್ಯಲೋಪವೆಸಗಿ, ದುರ್ವರ್ತನೆ ತೋರಿಸಿ, ಸಾರ್ವಜನಿಕ/ಸರ್ಕಾರಿ ನೌಕರರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡು ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು 1966, ನಿಯಮ 3(1)(i)(ii) ಮತ್ತು (iii) ರಡಿಯಲ್ಲಿ ಉಕ್ತವಾದ ದುರ್ನಡತೆ ಎಸಗಿರುವುದು ಮೇಲ್ನೋಟಕ್ಕೆ ಕಂಡುಬರುತ್ತಿರುವುದರಿಂದ ಎದುರುದಾರರು ವಿರುದ್ಧ ಇಲಾಖಾ ವಿಚಾರಣೆ ನಡೆಸಲು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ, ಮತ್ತು ಮೇಲ್ಮನವಿ) ನಿಯಮಾವಳಿಗಳು 1957ರ ನಿಯಮ 14-ಎ ಅಡಿ ಮಾನ್ಯ ಉಪಲೋಕಾಯುಕ್ತರಿಗೆ ವಹಿಸಲು ಶಿಫಾರಸ್ಸು ಮಾಡಿರುತ್ತಾರೆ.

ಸರ್ಕಾರವು ಮಾನ್ಯ ಉಪಲೋಕಾಯುಕ್ತರ ವರದಿಯನ್ನು ಪರಿಶೀಲಿಸಿ, ಈ ಪ್ರಕರಣದಲ್ಲಿ ಒಳಗೊಂಡಿರುವ ನೌಕರರ ವಿರುದ್ಧ ವಿಚಾರಣೆ ನಡೆಸುವುದು ಸೂಕ್ತವೆಂದು ನಿರ್ಣಯಿಸಿ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು, 1957ರ ನಿಯಮ 14-ಎ ರನ್ವಯ ಪ್ರಕರಣವನ್ನು ಮಾನ್ಯ ಉಪಲೋಕಾಯುಕ್ತರಿಗೆ ವಹಿಸುವ ಸಲುವಾಗಿ ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ/446/ಗ್ರಾಪಂಕಾ/2017 ಬೆಂಗಳೂರು, ದಿನಾಂಕ:15-06-2017.**

ಪ್ರಸ್ತಾವನೆಯಲ್ಲಿ ವಿವರಿಸಲಾದ ಅಂಶಗಳ ಹಿನ್ನೆಲೆಯಲ್ಲಿ ಶ್ರೀ ಎಂ.ಎಸ್.ಚಂದ್ರು, ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು, ಇರಸವಾಡಿ ಗ್ರಾಮ ಪಂಚಾಯತ್, ಇರಸವಾಡಿ, ಚಾಮರಾಜನಗರ ಜಿಲ್ಲೆ (ಹಾಲಿ ಉಮ್ಮತ್ತೂರು ಗ್ರಾಮ ಪಂಚಾಯತ್, ಚಾಮರಾಜನಗರ ತಾಲ್ಲೂಕು ಮತ್ತ ಜಿಲ್ಲೆ), ಇವರ ವಿರುದ್ಧ ಇಲಾಖಾ ವಿಚಾರಣಾ ನಡೆಸಲು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳು 1957ರ ನಿಯಮ 11ರ ಅನುಸಾರ ಇಲಾಖಾ ವಿಚಾರಣೆ ನಡೆಸಲು ಸದರಿ ನಿಯಮಾವಳಿಗಳ ನಿಯಮ 14-ಎ ಅಡಿ ಮಾನ್ಯ ಉಪಲೋಕಾಯುಕ್ತರಿಗೆ ವಹಿಸಲು ಸರ್ಕಾರವು ಈ ಮೂಲಕ ಮಂಜೂರಾತಿ ನೀಡಿದೆ.

ಈ ಪ್ರಕರಣದಲ್ಲಿ ಸರ್ಕಾರವು ಶಿಸ್ತು ಪ್ರಾಧಿಕಾರವಾಗಿದ್ದು, ಆಪಾದಿತರಿಗೆ, ನಿಯಮಾನುಸಾರ ಸೂಕ್ತ ದಂಡನೆ ವಿಧಿಸಲು ಸಕ್ಷಮ ಪ್ರಾಧಿಕಾರವಾಗಿರುತ್ತದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಟಿ.ವಿ. ಅರುಣ್‌ಕುಮಾರ್)
ಉಪನಿರ್ದೇಶಕರು ಹಾಗೂ ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

**ಗೆ,**

1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
2. ಮಾನ್ಯ ಉಪಲೋಕಾಯುಕ್ತರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.
3. ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು. (ಮೂಲ ಪತ್ರಗಳನ್ನು ಪುಟ ಸಂಖ್ಯೆ: 1 ರಿಂದ 103 ವರೆಗೂ ಲಗತ್ತಿಸಿ ಹಿಂದುರಿಗಿಸಲಾಗಿದೆ.)
4. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ, ಚಾಮರಾಜನಗರ ಜಿಲ್ಲೆ.
5. ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ, ಚಾಮರಾಜನಗರ ತಾಲ್ಲೂಕು ಮತ್ತು ಜಿಲ್ಲೆ.
6. ಶ್ರೀ ಎಂ.ಎಸ್.ಚಂದ್ರು, ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು, ಇರಸವಾಡಿ ಗ್ರಾಮ ಪಂಚಾಯತ್, ಇರಸವಾಡಿ, ಚಾಮರಾಜನಗರ ಜಿಲ್ಲೆ (ಹಾಲಿ ಉಮತ್ತೂರು ಗ್ರಾಮ ಪಂಚಾಯತ್, ಚಾಮರಾಜನಗರ ತಾಲ್ಲೂಕು ಮತ್ತ ಜಿಲ್ಲೆ)
7. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ
8. ಗಣಕ ಕೋಶ.